ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1082**
ವಿಧಾನ ಪರಿಷತ್ತು ಸದಸ್ಯರ ಹೆಸರು	:	ಶ್ರೀ ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	29.09.2020.
ಉತ್ತರಿಸುವ ಸಚಿವರು	:	ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಲಾಕ್‌ಡೌನ್ ಸಮಯದಲ್ಲಿ ಗ್ಯಾಸ್ ಕಂಪನಿಗಳಿಗೆ ಯಾವ ರೀತಿಯ ಸೌಕರ್ಯ ಒದಗಿಸಲಾಗಿತ್ತು;	ಲಾಕ್‌ಡೌನ್ ಸಂದರ್ಭದಲ್ಲಿ ಸರ್ಕಾರವು ತೈಲ ಕಂಪನಿಗಳೊಂದಿಗೆ ಸಮನ್ವಯ ಸಾಧಿಸಿ ಅನಿಲ ಸಿಲಿಂಡರ್/ ಇಂಧನ ಸಾಗಿಸುವ ಟ್ರಕ್‌ಗಳು/ ಬೃಹತ್ ಟ್ಯಾಂಕರ್‌ಗಳ ಸುಗಮ ಸಂಚಾರಕ್ಕಾಗಿ ರಸ್ತೆ ಪಾಸ್‌ಗಳನ್ನು ಒದಗಿಸಲಾಗಿದ್ದು, ಗ್ರಾಹಕರಿಗೆ ತೊಂದರೆಯಾಗದಂತೆ ಕಾರ್ಯನಿರ್ವಹಿಸಲಾಗಿದೆ. ಗ್ರಾಹಕರ ಮನೆಗಳಿಗೆ ಸಿಲಿಂಡರ್ ತಲುಪಿಸುವ ಡೆಲಿವರಿ ಸಿಬ್ಬಂದಿ/ಶೋರೂಂ ಸಿಬ್ಬಂದಿ ಹಾಗೂ ಪೆಟ್ರೋಲ್ ಬಂಕ್ ಸಿಬ್ಬಂದಿಗಳಿಗೆ ಪಾಸ್‌ಗಳನ್ನು ನೀಡಲಾಗಿತ್ತು. ಲಾಕ್‌ಡೌನ್ ಅವಧಿಯಲ್ಲಿ ಪೆಟ್ರೋಲ್ ಬಂಕ್ ಎಲ್.ಪಿ.ಜಿ ಗ್ಯಾಸ್ ಏಜೆನ್ಸಿಗಳನ್ನು ತೆರೆದು ಎಲ್.ಪಿ.ಜಿ. ಸಿಲಿಂಡರ್‌ಗಳನ್ನು ವಿತರಿಸಲು ಅನುಮತಿ ನೀಡಲಾಗಿತ್ತು. ಪೆಟ್ರೋಲ್ ಬಂಕ್/ಎಲ್.ಪಿ.ಜಿ. ವಿತರಣೆಯು ಕಡ್ಡಾಯ ಸೇವೆಯಾದ್ದರಿಂದ ಲಾಕ್‌ಡೌನ್ ನಿಯಮದಿಂದ ವಿನಾಯಿತಿ ನೀಡಿ ಸರ್ಕಾರವು ಆದೇಶಿಸಿರುತ್ತದೆ.
ಆ)	ಕಡ್ಡಾಯ ಸೇವೆಯಾದ ಕಾರಣ ಅವರ ಸೇವೆಯನ್ನು ಸರ್ಕಾರ ಗುರುತಿಸಿದೆಯೇ;	ಹೌದು.
ಇ)	ಲಾಕ್‌ಡೌನ್ ಸಮಯದಲ್ಲಿ ಗ್ಯಾಸ್ ಕಂಪನಿಯ ಕಾರ್ಮಿಕರು ಮತ್ತು ವಾಹನ ಚಾಲಕರು ತಮ್ಮ ಜೀವನದ ಹಂಗು ತೊರೆದು ಕಾರ್ಯ ನಿರ್ವಹಿಸುತ್ತಿದ್ದು, ಅವರಿಗೆ ಸರ್ಕಾರದಿಂದ ಸೌಲಭ್ಯಗಳನ್ನು ನೀಡಲಾಗಿದೆಯೇ;	ಲಾಕ್ ಡೌನ್ ಸಮಯದಲ್ಲಿ ತೈಲ ಕಂಪನಿಗಳು ಎಲ್ಲಾ ಪೆಟ್ರೋಲ್ ಬಂಕ್/ ಅನಿಲ ಸಿಲಿಂಡರ್ ವಿತರಣಾ (ಡೆಲಿವರಿ) ಸಿಬ್ಬಂದಿಗಳಿಗೆ ಫೇಸ್ ಮಾಸ್ಕ್/ಫೇಸ್ ಶೀಲ್ಡ್, ಸ್ಯಾನಿಟೈಸರ್, ಊಟ ಮತ್ತು ವಸತಿ ವ್ಯವಸ್ಥೆಯನ್ನು ಕಲ್ಪಿಸಿರುತ್ತವೆ ಹಾಗೂ ಅನಿಲ ಸ್ಥಾವರಗಳನ್ನು ಪೂರ್ಣವಾಗಿ ಸ್ಯಾನಿಟೈಸ್ ಮಾಡಿಸಿ ಮತ್ತು ಅನಿಲ ಸ್ಥಾವರದ ಪ್ರವೇಶ ದ್ವಾರದಲ್ಲಿ ಸಿಲಿಂಡರ್ ಟ್ರಕ್‌ಗಳ ಸಂಪೂರ್ಣ ಸ್ಯಾನಿಟೈಸ್ ಮಾಡುವ ವ್ಯವಸ್ಥೆ ಮಾಡಲಾಗಿರುತ್ತದೆ.
ಈ)	ಗ್ಯಾಸ್ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾಲೀಕರಿಗಾಗಲಿ ಮತ್ತು ಕಾರ್ಮಿಕರಿಗಾಗಲಿ ವಿಮೆ ಮಾಡಿಸಲಾಗಿದೆಯೇ;	ಈ ಬಗ್ಗೆ ತೈಲ ನಿಗಮಗಳ ಹಂತದಲ್ಲಿ ಕ್ರಮವಹಿಸಲಾಗಿರುತ್ತದೆ. ಕರೋನಾ ವೈರಾಣು ಸೋಂಕಿನಿಂದ ತೈಲ ಕಂಪನಿಯ ಸಿಬ್ಬಂದಿಗಳು ಅಕಸ್ಮಾತ್ ಮೃತ ಪಟ್ಟಲ್ಲಿ ರೂ.5.00 ಲಕ್ಷ ಹಣವನ್ನು ವಾರಸುದಾರರಿಗೆ ಪಾವತಿಸಲು ತೈಲ ಕಂಪನಿಗಳ ವತಿಯಿಂದ ಕ್ರಮ ಕೈಗೊಳ್ಳಲಾಗಿರುತ್ತದೆ.
ಉ)	ಗ್ಯಾಸ್ ಕಂಪನಿಯವರಿಗೆ ಆಗುವ ತೊಂದರೆಗಳನ್ನು ಯಾವ ಕಾಲಮಿತಿಯೊಳಗೆ ಬಗೆಹರಿಸಿ, ಸೂಕ್ತ ಸೌಲಭ್ಯಗಳನ್ನು ಒದಗಿಸಲಾಗುವುದು?	ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು ತೈಲ ಕಂಪನಿಗಳೊಂದಿಗೆ ಸಮನ್ವಯ ಸಾಧಿಸಿ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಕ್ರಮವಹಿಸಿರುತ್ತವೆ.

ಸಂಖ್ಯೆ: ಆನಾಸ 92 ಎಫ್.ಪಿ.ಪಿ 2020 (ಇ-ಆಫೀಸ್)

(ಕೆ. ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ, ಇಲಾಖಾ ಸಚಿವರು